ಗೋ ವಿಶ್ವ
Cow Universe
गौ विश्व

೩೪ನೆಯ ಸಂಚಿಕೆ

ಗುರುವಾಣಿ

# ಗೋಬಂಧುಗಳಾಗೋಣ



ಹೆಮ್ಮೆಯಿಂದ ಹೇಳುವುದಿದೆ –"ಇದು ನನ್ನ ಮನೆ, ನನ್ನ ಕಾರು, ನನ್ನ ಹೆಂಡತಿ, ನನ್ನ ಮಗು...."

"ಇದು ನನ್ನ ಹಸು" –ಈ ಕಾಳಜಿ ಸಾಧ್ಯವಿಲ್ಲವೆ?

ಹಸು ತನ್ನ ಪ್ರೇಮರಸವನ್ನು ಊಡಿಸಿ, ನಮ್ಮೆಲ್ಲರ ಜೀವಗಳನ್ನು ಪೊರೆದು, ನಮ್ಮ ಹತ್ತಿರದ ಸಂಬಂಧಿಯಾಗಿದ್ದಾಳೆ.

ಅದರೊಟ್ಟಿಗೇ ದುಃಖದ ಸಂಗತಿಯೆಂದರೆ...

ಅವಳ ಸಂತತಿಯೇ ನಾಶವಾಗುವ ದಿನಗಳು ಬರಬಹುದೆಂಬ ಆತಂಕವೂ ಮೂಡುತ್ತಿದೆ. ಆ ಆಘಾತಕ್ಕೀಡಾಗುವ ಮೊದಲೇ ಗೋಮಾತೆಯೊಂದಿಗಿನ ಸಂಬಂಧದ ಹಾರ್ದಿಕ ಬಂಧವನ್ನು ನೆನೆದು **ಗೋಬಂಧು**ಗಳಾಗೋಣ. ಅವಳ ಮೇಲೆ ಪ್ರೇಮದ ಧಾರೆಗಳನ್ನೇ ಎರೆಯೋಣ.

ಗೋವಿನ ಬಗೆಗೊಂದು ಆಪ್ತಭಾವ ಒಡಮೂಡಿಸಲು **ಗೋಬಂಧು** ಯೋಜನೆಯನ್ನು ಸಂಕಲ್ಪಿಸಲಾಗಿದೆ. ಒಂದು ಹಸು / ಒಂದು ಹೋರಿ / ಒಂದು ಕರುವನ್ನು ದತ್ತು ತೆಗೆದುಕೊಳ್ಳುವುದರ ಮೂಲಕ ಗೋವಿನ ಬಗೆಗಿನ ಕಾಳಜಿ, ಪ್ರೇಮಗಳನ್ನು ಎತ್ತರೆತ್ತರಕ್ಕೆ ಬೆಳೆಸಬಹುದು. ಇದಕ್ಕೆ ನಮ್ಮ ಗೋಶಾಲೆಯ ಸಹಕಾರ ಸದಾ ಇರುತ್ತದೆ.

**ಗೋಬಂಧುಗಳಾಗುವುದು ಹೇಗೆ?**

ಸರಳ...

• ನಮ್ಮ ಕಾರ್ಯಾಲಯ / ಗೋಶಾಲೆಯನ್ನು ಸಂಪರ್ಕಿಸಿ ಗೋವೊಂದನ್ನು ದತ್ತು ತೆಗೆದುಕೊಳ್ಳಬಹುದು.

• ಗೋಶಾಲೆಗೆ ಭೇಟಿ ನೀಡಬಹುದು, ಗೋವುಗಳೊಂದಿಗೆ ಸುಂದರ ಕ್ಷಣಗಳನ್ನು ಸವಿಯಬಹುದು.

• ನಮ್ಮ ಹುಟ್ಟುಹಬ್ಬ ಅಥವಾ ಇತರೆ ವಿಶೇಷ ದಿನಗಳನ್ನು ಗೋಶಾಲೆಯಲ್ಲಿ ಗೋಮಾತೆಯೊಂದಿಗೆ ಆಚರಿಸಬಹುದು.

• ಗೋವೊಂದರ ನಿರ್ವಹಣೆಗೆ ದಿನಂಪ್ರತಿ ರೂಪಾಯಿ ೫೦ರ ಸರಾಸರಿಯಲ್ಲಿ ವಾರ್ಷಿಕವಾಗಿ ರೂಪಾಯಿ ೧೮,೨೫೦ ತಗಲುವುದು. ವಾರ್ಷಿಕ ವೆಚ್ಚ ಭರಿಸುವುದುರ ಮೂಲಕ ದತ್ತು ಸ್ವೀಕಾರ ಮಾಡಬಹುದು.

### ಹೂರಣ

ಗುರುವಾಣಿ
ಗೋಕವಿತೆ: ಮೂಕ ದೇವತೆ
ರಾಷ್ಟ್ರೋತ್ಥಾನದಿಂದ ಗೋಸಂರಕ್ಷಣೆ
ಹಾಲಲ್ಲೆಷ್ಟು ವಿಧ!
ಗೋಪುಷ್ಟಿ ಮಹಾಯಜ್ಞ

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org, gougram.org



• ಮನೆಗಳಲ್ಲಿ ಗೋವನ್ನು ಸಾಕಲಾಗದಿದ್ದಲ್ಲಿ ಗೋಬಂಧು ಯೋಜನೆಯಲ್ಲಿ ಗೋವನ್ನು ದತ್ತು ಸ್ವೀಕಾರ ಮಾಡುವುದರ ಮೂಲಕ ಸೇವೆಯನ್ನು ಸಲ್ಲಿಸೋಣ.

• ನಮ್ಮೆಲ್ಲರ ಮೇಲೆ ಹಾಲು, ಮೊಸರು, ಬೆಣ್ಣೆ, ತುಪ್ಪಗಳ ಧಾರೆಗಳನ್ನೇ ಹರಿಸುತ್ತಿರುವ ಆ ಮಹಾಮಾತೆಯ ಸಲುವಾಗಿ ಅವಳನ್ನು ಪೊರೆಯುವ ಕಾರ್ಯವನ್ನು ಮಾಡೋಣ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

---

**ಗೋಕವಿತೆ**

## ಮೂಕ ದೇವತೆ

ಹಸು ಕಂದಮ್ಮಗಳಂತೆ, ಹಸು ಕಂದಮ್ಮಗಳ ಹೆತ್ತ ತಾಯಂತೆ
ಸದಾ ಬೀದಿ ಅಲೆವ ದೇವತೆಯಂತೆ, ಶೃಂಗಾರವಿಲ್ಲದ

ಶಬ್ದಗಳಂತೆ, ನೆಲದ ನಂಬಿಕೆಗೂ ಮುಗಿಲ ಮಿಂಚಿನ
ಸಂಚಿಗೂ ಸಿಲುಕಿದ ಮೂಕ ಕರುಣೆಯೆ
ನಿನಗೆ ಒಳಿತಾಗಲಿ; ಅಥವ ನಿನ್ನ ಹೆಸರಲ್ಲಿ
ಬದುಕುವ ನನಗೆ ಒಳಿತಾಗಲಿ. ಅದೇ ಮುಖ್ಯ ತಾನೆ!

ಈ ಪಾಪಿ ನರಜನ್ಮಕ್ಕೆ. ನಿನ್ನ ಹಿಂದೆ ಬಂದಾಗಲೆಲ್ಲ ನೀನು
ಒದೆಯಲಿಲ್ಲ ಮುಂದೆ ನಿಂತವರನ್ನೆಂದೂ ಹಾಯಲಿಲ್ಲ;
ನಾನು ನಿನ್ನಂತಲ್ಲ ಹಿಂದೆ ಬಂದ ಒದ್ದೆಗಣ್ಣಿನವರನ್ನು ಒದ್ದೆ,
ಮುಂದೆ ನಿಂತ ನಿದ್ದೆಗಣ್ಣಿನ ದಮನಿತರನ್ನು ತಿವಿದೆ, ಅವರು

ಕೆಳಗೆ ಬಿದ್ದು ನನ್ನ ಕಾಲಿನ ಧೂಳನ್ನು ಕಣ್ಣಿಗೊತ್ತಿಕೊಂಡರೂ
ಬಿಡಲಿಲ್ಲ, ಹಲ್ಲು ಉಗುರು ಕೊಂಬುಗಳನ್ನು ಅಹಂಕಾರದ
ಬಂದೂಕಿನ ಬಯೋನೆಟ್ಟುಗಳನ್ನಾಗಿ ಮಾಡಿಕೊಂಡೆ; ಕರುಳು
ಕತ್ತರಿಸಿ ರಕ್ತವನ್ನು ನೆಲಕ್ಕೆ ಅಂಟಿಸಿ ಅವರು ಕಿರುಚಿದರೂ

ಬಿಡಲಿಲ್ಲ, ನಾನು ಮನುಷ್ಯನೆಂಬುದನ್ನೂ ಮರೆತು
ಕೋರೆ ದಾಡೆಗಳಿಂದ ತಿವಿದೆ, ಅವರು ಸತ್ತರೂ ಬಿಡಲಿಲ್ಲ
ತಾಯಿ ಹಸುವೆ, ನೀನು ಜಗನ್ಮಾತೆ ಮಾತೆ ಆಡದಿದ್ದರೂ
ನೊಂದವರ ನೋವನ್ನು ಅರ್ಥಮಾಡಿಕೊಂಡ ದೇವತೆ

ನಿನಗೆ ಸಾವಿರದ ಶರಣು ತಾಯೆ
ನನ್ನ ನೆಲದ ಕುಲುಮೆಗೆ ತಂಪೆರೆವ ನಿನ್ನ ಪ್ರೀತಿಗೆ
ನನ್ನ ಹೊಲದ ತೆನೆಗೆ ಹಾಲೆರವ ನಿನ್ನ ಒಲವಿಗೆ
ಸಾವಿರದ ಶರಣು ತಾಯೆ

**–ಎಲ್.ಎನ್. ಮುಕುಂದರಾಜ್**

ಗೋಶಾಲೆ

# ರಾಷ್ಟ್ರೋತ್ಥಾನದಿಂದ ಗೋಸಂರಕ್ಷಣೆ

ಗೋವು ಎಂದರೆ ಹಾಗೇನೆ.

ನಿಜ ಭಾರತೀಯನ ಪಾಲಿಗೆ ಅದೆಂದೂ ಬರಿ ನಾಲ್ಕು ಕಾಲಿನ ಪ್ರಾಣಿಯಾಗಲಾರದು. ಅದು ಆತನ ಪಾಲಿಗೆ ಚತುಷ್ಪಾದಿ ಧರ್ಮದ ಪ್ರತೀಕ!

ಅದು ಕೇವಲ ಹಾಲು ನೀಡುವ ಯಂತ್ರವಲ್ಲ. ಇಹ–ಪರ ಸೌಖ್ಯಗಳನೀವ ಗೋ'ಮಾತೆ'!

ಭಾರತೀಯನ ಎಲ್ಲ ಕಾರ್ಯಗಳೂ ಪ್ರತ್ಯಕ್ಷ ಪರೋಕ್ಷವಾಗಿ ಗೋವಿನೊಂದಿಗೆ ತಳುಕು ಹಾಕಿಕೊಂಡಿವೆ. ಗೋಕ್ಷೀರವಿಲ್ಲದೇ ಪೂಜೆಯಿಲ್ಲ. ಗೋಗೃಥವಿಲ್ಲದೇ ಹೋಮ–ಹವನಾದಿಗಳಿಲ್ಲ. ಗೋಪೂಜೆಯಿಲ್ಲದೇ ಹೊಸಕಾರ್ಯಾರಂಭವಿಲ್ಲ. ಇಂತಿರುವಾಗ 'ನಮ್ಮತನ'ದ ಜಾಗೃತಿಯೆಂಬುದು ಗೋವನ್ನು ಹೊರತುಪಡಿಸಿ ಹೇಗಿದ್ದಿತು?

'ರಾಷ್ಟ್ರ ದೇವೋ ಭವ" ಎಂಬ ಧ್ಯೇಯವಾಕ್ಯದೊಂದಿಗೆ ಭಾರತೀಯತೆಯ ಸಂದೇಶ ಸಾರುವ ಮಹತ್ಕಾರ್ಯ ಮಾಡುತ್ತಿರುವ ರಾಷ್ಟ್ರೋತ್ಥಾನ ಪರಿಷತ್ ಕೂಡ ಈ ಚಿಂತನೆಯಿಂದ ಹೊರತಲ್ಲ. ಗೋಸಂರಕ್ಷಣೆಯಿಂದ ನಮ್ಮತನದ ಜಾಗೃತಿಯ ಮೂಲಕ ರಾಷ್ಟ್ರೋತ್ಥಾನ ಎಂಬ ಕಲ್ಪನೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ಗೋಸಂರಕ್ಷಣೆಗೆ ಮುಂದಾಗಿದೆ. ವಿದ್ಯೆ, ಆರೋಗ್ಯ, ಸಾಹಿತ್ಯ, ಜಾಗರಣ ಹೀಗೆ ಹತ್ತು ಹಲವು ಮಜಲುಗಳಲ್ಲಿ ನಿಸ್ಪೃಹ ದೇಶಸೇವೆಗೈಯ್ಯುತ್ತಿರುವ ಪರಿಷತ್ ಗೋಸಂರಕ್ಷಣೆಯಲ್ಲೂ ತನ್ನನ್ನು ತೊಡಗಿಸಿಕೊಂಡಿರುವ ಸಂಗತಿ ಅನೇಕರಿಗೆ ತಿಳಿದಿಲ್ಲ.




ಹೌದು. ಕಳೆದ ೫ ವರ್ಷಗಳಿಂದ ಭಾರತೀಯ ಗೋತಳಿಗಳನ್ನು ವಿನಾಶದಂಚಿಂದ ರಕ್ಷಿಸುವ, ಶುದ್ಧ ಭಾರತೀಯ ತಳಿಗಳ ಅಭಿವೃದ್ಧಿಪಡಿಸುವ, ಕಸಾಯಿಖಾನೆಗಳಿಗೆ ಸಾಗುತ್ತಿರುವ ಮೂಕಪಶುಗಳ ಸಹಜ ಬದುಕಿಗೆ, ಹಿಂಸಾರಹಿತ ಸಾವಿಗೆ ಅನುಕೂಲಿಸುವ ಮಹತ್ತರ ಉದ್ದೇಶಗಳನ್ನಿಟ್ಟುಕೊಂಡು ರಾಷ್ಟ್ರೋತ್ಥಾನ ಪರಿಷತ್ ಗೋಶಾಲೆಯೊಂದನ್ನು ಸ್ಥಾಪಿಸಿದೆ. ಬೆಂಗಳೂರಿನ ಅತಿ ಸಮೀಪದ ಘಾಟಿ ಸುಬ್ರಹ್ಮಣ್ಯ ಕ್ಷೇತ್ರದ ಬಳಿ.

ಬೆಂಗಳೂರಿನಿಂದ ಘಾಟಿ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿಯಲ್ಲಿ ಸುಬ್ರಹ್ಮಣ್ಯಕ್ಕಿಂತ ೨ ಕಿಲೊಮೀಟರ್‌ಗೂ ಮೊದಲು 'ಮಾಧವಸೃಷ್ಟಿ' ಎಂಬಲ್ಲಿ ಈ ಗೋಶಾಲೆ ಇದೆ. ಕಣ್ಣಳತೆಗೂ ಮೀರಿದ ಹುಲ್ಲುಗಾವಲು... ಮಧ್ಯದಲ್ಲಿ ಗೋವರ್ಧನಗಿರಿಧಾರಿಯ ಪುಟ್ಟ ದೇವಳ... ಅದರ ಸುತ್ತಲೂ ವೃತ್ತಾಕಾರವಾಗಿ ಕಟ್ಟಲ್ಪಟ್ಟ ವ್ಯವಸ್ಥಿತ ಗೋಶಾಲೆ, ಗೋಪಿಕೃಷ್ಣನನ್ನೇ ಕರೆಯುತ್ತಿರುವವೋ ಎಂಬ ಹಾಗೆ ಸುತ್ತ ನೆರೆಯುವ, ಅಂಬೆಗರೆಯುವ ಅಪ್ಪಟ ದೇಸಿ ಹಸು–ಕರುಗಳು... ಹತ್ತಿರದಲ್ಲೇ ಸಲಿಲಗಾಮಿನಿಯಾದ ಪುಟ್ಟ ನದಿ... ಒಹ್! ಭಾವುಕನೋರ್ವನಿಗೆ ಸಾಕ್ಷಾತ್ ವ್ರಜವೇ ಇದು ಎಂಬ ಭಾಸವಾಗುವ ಹಾಗಿದೆ ಗೋಶಾಲೆ. ಆತನಿಗೆ 'ಸಂಪೂರ್ಣ ಗೋಶಾಲೆ, ಗೋಶಾಲೆಯ ಹಾಗಿಲ್ಲ.. ಬದಲು ಕೃಷ್ಣ ದೇವಸ್ಥಾನವೇ' ಎಂದೆನ್ನಿಸುವ ಹಾಗೆ ಸುಂದರ, ಶುದ್ಧ ಹಾಗು ವ್ಯವಸ್ಥಿತ.

ಗೋಶಾಲೆಯಲ್ಲಿ ಪ್ರಸ್ತುತ ಕಾಂಕ್ರೇಜ್, ಹಳ್ಳಿಕಾರ್, ಗೀರ್, ಮಲೆನಾಡು ಗಿಡ್ಡ, ಕಾಸರಗೋಡ್, ದೇವನಿ ಮೊದಲಾದ



ತಳಿಗಳಿಗೆ ಸೇರಿದ ೨೩೦ಕ್ಕೂ ಹೆಚ್ಚಿನ ಗೋವುಗಳಿವೆ. ಅವುಗಳಿಗೆ ಅಚ್ಚುಕಟ್ಟಾದ ಸುಸಜ್ಜಿತ ಗೋಶಾಲೆ ಇದೆ. ತಳಿ ಸಂಕರ ಆಗದ ಹಾಗೆ ಅವುಗಳನ್ನು ಬೇರೆ ಬೇರೆ ತಂಡಗಳಲ್ಲಿ ಕಟ್ಟಲಾಗುತ್ತಿದೆ. ಮೇಯಲು ಬಿಡುವಾಗಲೂ ಆ ಕುರಿತು ವಿಶೇಷ ಕಾಳಜಿವಹಿಸಲಾಗುತ್ತಿದೆ. ವಿಶೇಷವೆಂದರೆ ನೂರು ಎಕರೆಗಳ ವಿಸ್ತಾರದ ಭೂಮಿಯ ಪ್ರತಿ ಅಂಗುಲವೂ ಗೋವಿಗಾಗಿ ಮಾತ್ರ ಬಳಕೆಯಾಗುತ್ತಿದೆ. ಗೋಶಾಲೆಯ ಸುತ್ತಲೂ ಇರುವ ಭೂಮಿಯಲ್ಲಿ ಗೋವಿನ ಗಂಜಲ ಬಳಸಿ ಹುಲ್ಲು ಬೆಳೆಯಲಾಗುತ್ತಿದೆ. ರಾಸಾಯನಿಕಗಳ ಬಳಕೆ ಒಂದಿನಿತೂ ಇಲ್ಲ. ಗೋಮಯದ ಸಾರದಿಂದ ಬೆಳೆದ ಹುಲ್ಲು ಮತ್ತೆ ಗೋವಿಗೆ ಆಹಾರವಾಗುದರ ಮೂಲಕ ಒಂದು ವಿಶಿಷ್ಟ ಗೋ–ಆಧಾರಿತ ಸಹಜ ಆಹಾರ ಚಕ್ರ ಇಲ್ಲಿ ನಿರ್ಮಾಣಗೊಂಡಿದೆ. ನೀರು ಪೂರೈಕೆಗಾಗಿ ೩ ಕೊಳವೆ ಬಾವಿಗಳಿವೆ. ಗೋಶಾಲೆಯಲ್ಲಿ ೨೫ಕ್ಕೂ ಹೆಚ್ಚು ಕೆಲಸಗಾರರು ಸ್ವಚ್ಛತೆ, ಆಹಾರಪೂರೈಕೆ, ಪೋಷಣೆಗಾಗಿ ದುಡಿಯುತ್ತಿದ್ದಾರೆ. ಬರುವ ಹಾಲು ಗೋಪ್ರೇಮಿ ಕಾರ್ಯಕರ್ತರ ಬಳಕೆಗೆ ಉಪಯೋಗಗೊಳ್ಳುತ್ತದೆ. ಸದ್ಯದಲ್ಲೇ ಅರ್ಕ ತಯಾರಿಕಾ ಘಟಕವನ್ನು ಪ್ರಾರಂಭಿಸುವ ಯೋಜನೆ ಇದೆ ಎನ್ನುತ್ತಾರೆ ಗೋಶಾಲೆಯ ಪ್ರಮುಖ ಶ್ರೀ ನಾರಾಯಣ ಭಟ್.

ಇಲ್ಲಿರುವ ಗೋವುಗಳು ಬಹಳಷ್ಟು ಕಸಾಯಿಖಾನೆಗಳಿಂದ ಬಂದವುಗಳು. ಕೆಲವನ್ನು ಮಾತ್ರ ರೈತರಿಂದ ಖರೀದಿಸಲಾಗಿದೆ.



ಹಾಗಾಗಿ ಬಹಳಷ್ಟು ಹಸುಗಳು ಹಾಲು ನೀಡುವುದಿಲ್ಲ. ಅವುಗಳಿಗೆ ಸಹಜ ಬದುಕು, ಕೊನೆಯಲ್ಲಿ ಸಹಜ ಸಾವು ಬರುವಂತೆ ಅನುಕೂಲಿಸಲು ಈ ಗೋಶಾಲೆಯನ್ನು ಪ್ರಾರಂಭಿಸಿದ್ದೇವೆ ಎನ್ನುತ್ತಾರೆ ಗೋಪ್ರೇಮಿ ಹಾಗೂ ಗೋಶಾಲೆಯ ಪ್ರಾರಂಭಕ್ಕೆ ಕಾರಣೀಭೂತರಲ್ಲೊಬ್ಬರಾದ ಜೀವನ್ ಕುಮಾರ್. ಗೋವುಗಳನ್ನು ಕೊಳ್ಳುವಷ್ಟು ಅನುಕೂಲವಿಲ್ಲದ ಬಡರೈತರಿಗೆ ಉಚಿತವಾಗಿ ಕರಾರಿನ ಮೇಲೆ ಗೋವುಗಳನ್ನು ನೀಡುತ್ತಾರೆ ಕೂಡ. ಕರಾರೇನೆಂದರೆ ಗೋಶಾಲೆಯಿಂದ ತೆಗೆದು-ಕೊಂಡ ಗೋವುಗಳನ್ನು ಅವರು ಮಾರುವಂತಿಲ್ಲ. ಸಾಕಲು ಕಷ್ಟವಾಗುವುದಾದರೆ ಗೋಶಾಲೆಗೆ ವಾಪಾಸು ನೀಡಬಹುದು.

ಬಹುತೇಕವು ಕಸಾಯಿಖಾನೆಗೆ ಹೊರಟ ಹಾಲು ನೀಡದ ಗೋವುಗಳಾದ ಹಿನ್ನೆಲೆಯಲ್ಲಿ ಈ ಎಲ್ಲ ವ್ಯವಸ್ಥೆಗಳಿದ್ದರೂ ಒಂದು ವರ್ಷಕ್ಕೆ ೪-೫ ಲಕ್ಷಗಳಷ್ಟು ಹಣ ಖೋತ ಬೀಳುತ್ತದೆ. ಇಂತಹ ಉತ್ತಮ ಕೆಲಸಗಳಿಗೆ ಸಹೃದಯರು ಸಹಕಾರ ನೀಡಿ-ದರೆ ಅದು ಇನ್ನಷ್ಟು ಉತ್ತಮವಾಗಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋಭಕ್ತರಿಗೆ, ಗೋಪ್ರೇಮಿಗಳಿಗೆ ಈ ಮಹತ್ಕಾರ್ಯದಲ್ಲಿ ಭಾಗಿಯಾಗಲು ಪರಿಷತ್ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ.



**ಪ್ರಕಲ್ಪದ ಮುಂದಿನ ಯೋಜನೆಗಳು**

- ಗೋವುಗಳಿಗೆ ಆರೋಗ್ಯಕರ ಸ್ಥಳಾವಕಾಶ ಒದಗಿಸಲು ಸುಸಜ್ಜಿತ ಹೊಸ ಗೋಶಾಲೆಗಳ ನಿರ್ಮಾಣ
- ಹಸಿ ಹುಲ್ಲು ಕೃಷಿ ವ್ಯವಸ್ಥೆ
- ಪೌಷ್ಟಿಕ ಮೇವು ತಯಾರಿಕಾ ವ್ಯವಸ್ಥೆ
- ಜಲಸಂಪನ್ಮೂಲದ ವ್ಯವಸ್ಥೆ
- ಜಲಸಂಗ್ರಹಣಾ ವ್ಯವಸ್ಥೆ
- ನೀರಿನ ಮರುಬಳಕೆ ವ್ಯವಸ್ಥೆ
- ಸುಸಜ್ಜಿತ ಮೇವು ಸಂಗ್ರಹಾಕಾರ
- ಗೋ ಉತ್ಪನ್ನಗಳ ಸಂಸ್ಕರಣಾ ಕೇಂದ್ರ
- ತಳಿ ಅಭಿವೃದ್ಧಿ ಕೇಂದ್ರ
- ಸುಸಜ್ಜಿತ ಸಾವಯವ ಗೊಬ್ಬರ ಉತ್ಪಾದನಾ ಘಟಕ
- ಸಾಯವಯವ ಕೃಷಿ ಕುರಿತು ಸುತ್ತಮುತ್ತಲಿನ ಹಳ್ಳಿಯ ಕೃಷಿಕ ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ಪ್ರೋತ್ಸಾಹಿಸಲು ಸಾವಯವ ಕೃಷಿ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರದ ಸ್ಥಾಪನೆ
- ಕಾರ್ಯಕರ್ತರ ವಸತಿ ಮತ್ತು ಕಾರ್ಯಾಲಯ ಸ್ಥಾಪನೆ

ಇಂತಹ ಅಪರೂಪದ ಕೆಲಸಗಳಲ್ಲಿ ನಮ್ಮ ಯೋಗದಾನವಿದ್ದರೆ ನಮ್ಮ ಬದುಕಿಗೂ ಒಂದು ಅರ್ಥ, ಅಲ್ಲವೇ?

ರಾಷ್ಟ್ರೋತ್ಥಾನ ಗೋಶಾಲೆ ಸಂಪರ್ಕ:

ದೂರವಾಣಿ: ೦೮೦-೨೬೬೧೨೭೩೦, ೩೧, ೩೨

ಇಮ್ಮೈಲ್: rashtrotthana@gmail.com

**ಲೇಖನ: ಮಧುಕೇಶ ದೊಡ್ಡೇರಿ**

ಫೋಟೋಗಳು: **ಡಾ। ಯು. ಬಿ. ಪವನಜ**

# ಹಾಲಲ್ಲೆಷ್ಟು ವಿಧ!

## ಭಾರತೀಯ ಹಸುಗಳ ಹಾಲಿನಲ್ಲಿರುವುದು ಉತ್ತಮ ಪ್ರೋಟೀನ್ ಮಾತ್ರ!

'ಬೆಳ್ಳಗಿರುವುದೆಲ್ಲ ಹಾಲಲ್ಲ,' ಎಂದು ಪಾಠ ಕೇಳಿದ್ದೀರಿ! ಇನ್ನು ಮುಂದೆ ನೀವು ಈ ನುಡಿಯ ಜೊತೆಗೆ ಬೆಳ್ಳಗಿರುವ ಹಾಲೆಲ್ಲ ಒಂದೇ ಅಲ್ಲ ಎನ್ನುವ ಹೊಸ ನುಡಿಯನ್ನೂ ಕೂಡಿಸಬಹುದು. ಹೌದು. ಅದರಲ್ಲೇನು ವಿಶೇಷ ಸ್ವಾಮಿ. ನಮ್ಮ ಡೈರಿಯವ ತರುವ ಹತ್ತಾರು ವಿಧದ ಹಾಲೆಲ್ಲವೂ ಬೆಳ್ಳಗೇ ಕಾಣುತ್ತದಲ್ಲ ಎಂದಿರಾ? ಡೈರಿಯ ಹಾಲಿನ ವಿಷಯವನ್ನಲ್ಲ ಸ್ವಾಮಿ ನಾನು ಹೇಳಿದ್ದು. ಗೋವಿನ ಹಾಲಿನ ವಿಷಯ. ಗೋವು, ಎಮ್ಮೆ ಎಲ್ಲದರ ಹಾಲನ್ನೂ ಬೆರೆಸಿ, ಬೆಣ್ಣೆ ಕಡೆದು, ನೀರು ಕಲಸಿ, ಗೊಟಾಯಿಸಿ, ಬೇಕಿದ್ದಷ್ಟೆ ಬೆಣ್ಣೆಯನ್ನು ಮತ್ತೆ ಕೂಡಿಸಿ, ಕಾಯಿಸಿ ಹತ್ತಾರು ಹೆಸರಲ್ಲಿ ಡೈರಿಯವರು ನಿಮಗೆ ಮಾರುತ್ತಾರೆ ಎನ್ನುವುದು ನಿಮಗೂ ಗೊತ್ತು, ನನಗೂ ಗೊತ್ತು. ಈ ವಿಷಯವನ್ನಲ್ಲ ನಾನು ಹೇಳಿದ್ದು. ಗೋವಿನ ಕೆಚ್ಚಲಿನಿಂದ ಹಿಂಜಿದ ಹಾಲಿನಲ್ಲೂ ಹಲವು ವೈವಿಧ್ಯಗಳಿವೆಯಂತೆ. ಅದಕ್ಕೇ ಹೇಳಿದ್ದು ಬೆಳ್ಳಗಿರುವ ಹಾಲೆಲ್ಲ ಒಂದೇ ಅಲ್ಲ್‌ಅಂತ. ಈ ನುಡಿಗೆ ಕರ್ನಾಲ್‌ನಲ್ಲಿರುವ ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು ಇನ್ನೂ ಒಂದು ಭಾಷ್ಯವನ್ನು ಸೇರಿಸಿದ್ದಾರೆ. ಹಾಲಿನಲ್ಲಿರುವ ಪ್ರೋಟೀನುಗಳ ವಿಷಯಕ್ಕೆ ಬಂದಾಗ ನಮ್ಮ ದೇಶದ ಹಸುಗಳ ಹಾಲೇ ಶ್ರೇಷ್ಠವಂತೆ. ಗೋಮಾತೆ ಶ್ರೇಷ್ಠ. ಅದರಲ್ಲೂ ಭಾರತೀಯ ಗೋಮಾತೆ ಇನ್ನೂ ಶ್ರೇಷ್ಠ!

ಅದು ಹ್ಯಾಗೆ ಎಂದು ಆಶ್ಚರ್ಯವಾಯಿತೇ? ಕೇಳಿ. ಹಾಲು ಒಂದು ಪರಿಪೂರ್ಣ ಆಹಾರ ಎನ್ನುವ ಕ್ಲೀಷೆಯನ್ನು ಕೇಳಿದ್ದೀರಲ್ಲ. ಕ್ಲೀಷೆಯಾದರೂ ಅದು ನಿಜ. ಒಂದು ಲೋಟ, ಅರ್ಥಾತ್ ಒಂದು ಸಾಮಾನ್ಯ ಕೋಲಾ ಬಾಟಲಿಯಷ್ಟು ಹಾಲು ಕುಡಿದರೆ ದೇಹಕ್ಕೆ ಬೇಕಾಗುವ ಎಲ್ಲ ಪೋಷಕಾಂಶಗಳೂ ಸಿಗುತ್ತವೆ. ಪ್ರತಿ ನೂರು ಮಿಲಿ ಹಸುವಿನ ಹಾಲಿನಲ್ಲಿ ಹಾಲಿನಲ್ಲಿ ೩ ಗ್ರಾಂ ಪ್ರೋಟೀನು, ೩ರಿಂದ ೪ ಗ್ರಾಂ ಕೊಬ್ಬು ಮತ್ತು ೫ ಗ್ರಾಂನಷ್ಟು ಶರ್ಕರವಿವೆ. ಅರ್ಥಾತ್, ದೇಹದ ದುರಸ್ತಿಗೆ ಬೇಕಾದ ಪ್ರೋಟೀನ್, ಆಪತ್ಕಾಲಕ್ಕೆ ಬೇಕಾಗುವಷ್ಟು ಕೊಬ್ಬು ಮತ್ತು ತಕ್ಷಣದ ಚಟುವಟಿಕೆಗೆ ಶಕ್ತಿಯೊದಗಿಸುವ ಶರ್ಕರ ಇವೆಲ್ಲವೂ ಹೆಚ್ಚೂ ಕಡಿಮೆ ಸಮಪ್ರಮಾಣದಲ್ಲಿ ದೊರೆಯುತ್ತವೆ. ಬೆಳೆಯುವ ಮಕ್ಕಳಿಗೆ ಅತಿ ಅವಶ್ಯಕವಾದ ಪ್ರೋಟೀನಂತೂ ತಾಯ ಹಾಲಿಗಿಂತಲೂ ದುಪ್ಪಟ್ಟು ಪ್ರಮಾಣದಲ್ಲಿ ಹಸುವಿನ ಹಾಲಿನಲ್ಲಿದೆ. ಹಾಲನ್ನು ಅರಗಿಸಿಕೊಳ್ಳುವುದೂ ಸುಲಭ. ಈ ಎಲ್ಲ ಕಾರಣಗಳಿಂದ ಹಸುವಿನ ಹಾಲಿನ ಮೇಲೆ ತಾಯಂದಿರಿಗೆ ಅಪಾರ ಪ್ರೀತಿ.

ಆದರೆ ಇನ್ನೊಂದು ಮಾತನ್ನೂ ನೆನಪಿಡಿ. ಹಾಲಲ್ಲಿರುವ ಪ್ರೋಟೀನೆಲ್ಲವೂ ಆರೋಗ್ಯಕರವಲ್ಲ. ಆಶ್ಚರ್ಯವಾಯಿತೇ? ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನಲ್ಲಿ ಇದು ಅತಿ ದೊಡ್ಡ ವ್ಯಾಪಾರಕ್ಕೆ ಕಾರಣವಾಗಿದೆ. ನ್ಯೂಜಿಲೆಂಡಿನ ಹೈನುಗಾರಿಕೆ ತಜ್ಞರು ಪ್ರೋಟೀನ್ ಹೆಚ್ಚಿರುವ ಹಾಲನ್ನು ಹೆಚ್ಚೆಚ್ಚು ಕರೆಯುವಂಥ ಹಸುವಿನ ಸೃಷ್ಟಿಗೆ ಹೊರಟಿದ್ದರಂತೆ. ಆ ಸಂದರ್ಭದಲ್ಲಿ ಅವರಿಗೆ ಹಸುವಿನ ಹಾಲಿನಲ್ಲಿರುವ ಪ್ರೋಟೀನಿನ ನಿಜ ಪರಿಚಯವಾಯಿತಂತೆ. ಹಸುವಿನ ಹಾಲಿನಲ್ಲಿ ಪ್ರಮುಖವಾಗಿ ಕೇಸೀನ್ ಎನ್ನುವ ಪ್ರೋಟೀನ್ ಇದೆ. ಇದರಲ್ಲಿ ಒಟ್ಟು ೨೦೯ ಅಮೈನೊ ಆಮ್ಲಗಳಿವೆ. ಪ್ರೋಟೀನ್ ಎಂದರೆ ವಿವಿಧ ಅಮೈನೊ ಆಮ್ಲಗಳ ಸರಮಾಲೆ ಎಂದು ಹೇಳಬೇಕಿಲ್ಲವಷ್ಟೆ. ಈ ಇಡೀ ೨೦೯ ಮಣಿಗಳ ಪ್ರೋಟೀನ್ ತಯಾರಿಕೆಯನ್ನು ನಾಲ್ಕು ವಿಧದ ಜೀನ್‌ಗಳು ನಿಯಂತ್ರಿಸುತ್ತವೆ. ಇವನ್ನು ಆಲ್ಫ ೧, ಆಲ್ಫಾ೨, ಬೀಟ ಹಾಗೂ ಕಪ್ಪಾ ಎಂದು ಹೆಸರಿಸಿದ್ದಾರೆ (ಇವೆಲ್ಲವೂ ಗ್ರೀಕ್ ಅಕ್ಷರಮಾಲೆಗಳಷ್ಟೆ!). ಈಗ ವಿಜ್ಞಾನಿಗಳ ಗಮನವನ್ನು ಸೆಳೆದಿರುವ ಪ್ರೋಟೀನ್ ಬೀಟ ಬಗೆಯದು. ಇದನ್ನು ಬೀಟ-ಕೇಸೀನ್ ಎನ್ನಬಹುದು.

ಪ್ರಪಂಚದಲ್ಲಿರುವ ಎಲ್ಲ ರಾಸುಗಳನ್ನೂ ಗಮನಿಸಿದರೆ ಒಟ್ಟು ಹನ್ನೆರಡು ಬಗೆಯ ಬೀಟ-ಕೇಸೀನ್ ಗಳನ್ನು ಕಾಣಬಹುದು. ಆದರೆ ಇವೆಲ್ಲವೂ ಸಮ ಪ್ರಮಾಣದಲ್ಲಿ ಕಾಣಸಿಗವು. ಎ೧, ಎ೨ ಮತ್ತು ಎ೩ ಎನ್ನುವ ಜೀನ್ ರೂಪಗಳು ಅತಿ ಸಾಮಾನ್ಯ. ಇವುಗಳಲ್ಲಿ ಏನು ವ್ಯತ್ಯಾಸ ಎಂದು ಕೇಳಿದಿರಾ? ಏನಿಲ್ಲ. ೨೦೯ ಅಮೈನೋ ಆಮ್ಲಗಳ ಸರಮಾಲೆಯಲ್ಲಿ ತುಸು ವ್ಯತ್ಯಾಸ ಇರುತ್ತದೆ. ಈ ಸರಮಾಲೆಯನ್ನು ಬಣ್ಣದ ಮಣಿಗಳ ಮಾಲೆ ಎಂದುಕೊಳ್ಳಿ. ವಿಭಿನ್ನ ಬೀಟ ಕೇಸೀನ್ ಪ್ರೋಟೀನ್ ಮಾಲೆಯಲ್ಲಿ ಕೆಲವು ಕಡೆಯಲ್ಲಿ ಇರುವ ಮಣಿಗಳ ಬಣ್ಣ ಬೇರೆ, ಬೇರೆಯಾಗಿರುತ್ತದೆ ಎನ್ನಬಹುದು. ಉದಾಹರಣೆಗೆ, ಎ೧ ಬೀಟ-ಕೇಸೀನ್ ಮತ್ತು ಎ೨ ಬೀಟ ಕೇಸೀನ್‌ಗಳ ೬೭ನೇ ಮಣಿ ವಿಭಿನ್ನವಾಗಿದೆ. ಎ೧ ನಲ್ಲಿ ಅದು ಹಿಸ್ಟಿಡಿನ್ ಎನ್ನುವ ಅಮೈನೊ ಆಮ್ಲ. ಎ೨ ನಲ್ಲಿ ಅದು ಪ್ರೋಲೀನ್ ಎನ್ನುವ ಅಮೈನೊ ಆಮ್ಲ.

ಇಷ್ಟೇ ತಾನೇ ಎಂದು ಬಿಡಬಹುದಿತ್ತು. ಆದರೆ ಕಥೆ ಬೇರೆಯೇ ಇದೆ. ಇದೊಂದೇ ವ್ಯತ್ಯಾಸ ಪ್ರೋಟೀನ್‌ನ ಸ್ವರೂಪವನ್ನೇ ಬದಲಿಸಿಬಿಡುತ್ತದೆ. ಶಾಲೆಯಲ್ಲಿ ಹೇಳಿಕೊಟ್ಟಿರುವುದು ನೆನಪಿದೆಯಲ್ಲ. ಪ್ರೋಟೀನ್‌ಗಳ ಚಟುವಟಿಕೆಗೆ ಅವುಗಳ ಸ್ವರೂಪವೇ ಮೂಲ. ಸ್ವರೂಪವೇ ಬದಲಾದರೆ ಅವುಗಳ ಚಟುವಟಿಕೆಯೂ ಬೇರೆಯೇ ಆಗುತ್ತದೆಯಷ್ಟೆ. ಇಲ್ಲೂ ಆಗುವುದು ಅದೇ ಕಥೆ. ಎ೧-ಬೀಟ ಕೇಸೀನ್ ನಮ್ಮ ಹೊಟ್ಟೆಯನ್ನು ಹೊಕ್ಕಾಗ ಅಲ್ಲಿ ಬೀಟ-ಕೇಸೋಮಾರ್ಫಿನ್ ೭ (ಬಿಸಿಎಂ೭) ಎನ್ನುವ ರೂಪಕ್ಕೆ ಜೀರ್ಣವಾಗುತ್ತದೆ. ಎ೧ ಮತ್ತು ಬಿ ಬೀಟ ಕೇಸೀನ್ ಜೀರ್ಣವಾದಾಗ ಬಿಸಿಎಂ ೭ ಉತ್ಪತ್ತಿಯಾಗುತ್ತದೆ. ಆದರೆ ಎ೨ ಜೀರ್ಣವಾದಾಗ ಹೀಗಾಗುವುದಿಲ್ಲ. ಎ೨ ಬೀಟ ಕೇಸೀನ್ ಹಾಲನ್ನೇ ಉತ್ಪಾದನೆ ಮಾಡುವ ತಳಿಗಳು ಹೆಚ್ಚು ಹಾಲನ್ನು ನೀಡುತ್ತವೆಂದು ಅಂಥ ತಳಿಗಳ ಉತ್ಪಾದನೆಗೆ ಎಳಸಲಾಗಿತ್ತು. ಆದರೆ ಹಾಲು ಜೀರ್ಣವಾದಾಗ ಉತ್ಪತ್ತಿಯಾಗುವ ಬಿಸಿಎಂ೭ ಆರೋಗ್ಯಕರವಲ್ಲ ಎನ್ನುವ ವರದಿಗಳಿವೆ. ಹೃದಯದ ತೊಂದರೆಯನ್ನು ಗಮನಿಸಿದರೆ ಎ೧ ಬಗೆಯ ಹಾಲನ್ನು ಕುಡಿಯುವವರಿಗೆ ಹೋಲಿಸಿದಲ್ಲಿ, ಎ೧ ಕುಡಿಯದವರಲ್ಲಿ ಕಡಿಮೆ. ಉದಾಹರಣೆಗೆ ಬಹುಪಾಲು ಎ೧ ಬೀಟ ಕೇಸೀನ್ ಹೆಚ್ಚಿರುವ ಹಾಲನ್ನೆ ಹೆಚ್ಚು ಬಳಸುವ ಐರ್‌ಲ್ಯಾಂಡ್ ಜನತೆಯಲ್ಲಿ

ಹೃದಯದ ರಕ್ತನಾಳಗಳ ತೊಂದರೆಯ ಪ್ರಮಾಣ ಎ೧ ಬೀಟ ಕೇಸೀನ್ ಕಡಿಮೆ ಇರುವ ಹಾಲನ್ನು ಬಳಸುವ ಫ್ರೆಂಚರಿಗಿಂತ ಕಡಿಮೆ. ಎ೧ ಬೀಟ ಕೇಸೀನ್ ಅನ್ನು ಉಂಡ ಇಲಿ, ಮೊಲ, ಗಿನಿಇಲಿಗಳ ರಕ್ತನಾಳಗಳಲ್ಲಿ ಇಂಥ ತೊಂದರೆಗಳು ಕಾಣಿಸಿಕೊಂಡದ್ದು ವರದಿಯಾಗಿದೆ.

ಅರ್ಥಾತ್ ಹಾಲಿನಲ್ಲಿರುವ ಪ್ರೋಟೀನ್ ಎಲ್ಲವೂ ಒಳ್ಳೆಯುದಲ್ಲ ಎನ್ನುವ ತೀರ್ಮಾನಕ್ಕೆ ವಿಜ್ಞಾನಿಗಳು ಬಂದಿದ್ದಾರೆ. ಇದು ನಿಜವೋ, ಸುಳ್ಳೋ. ಕೇವಲ ಎ೨ ಬೀಟ ಕೇಸೀನ್ ಪ್ರೋಟೀನ್ ಇರುವ ಹಾಲನ್ನು ತಯಾರಿಸಲು ಶತಪ್ರಯತ್ನ ಪಡುತ್ತಿದ್ದಾರೆ. ನ್ಯೂಜಿಲೆಂಡಿನಲ್ಲಂತೂ ಇದನ್ನೆ ಬಂಡವಾಳವನ್ನಾಗಿಟ್ಟುಕೊಂಡು ಎ೨ ಕಾರ್ಪೊರೇಷನ್ ಎನ್ನುವ ಸಂಸ್ಥೆ ಎ೨ ಬೀಟ ಕೇಸೀನ್ ಇರುವ ಹಾಲನ್ನು ತಯಾರಿಸಿ ಮಾರುತ್ತಿದೆ. ಇದೇ ಕಂಪೆನಿಯ ಸಂಶೋಧನೆಗಳು ಪ್ರಪಂಚದ ಹಸುಗಳ ತಳಿಗಳೆಲ್ಲವಲ್ಲೂ ಎ೧, ಎ೨ ಮತ್ತು ಬಿ ಬೀಟ ಕೇಸೀನ್ ಜೀನ್‌ಗಳ ವಿತರಣೆ ಸಮಾನವಾಗಿಲ್ಲವೆಂದು ತಿಳಿಸಿತ್ತು. ತಳಿ ಅಭಿವೃದ್ಧಿಯಲ್ಲಿ ಎ೨ ಬಗೆಯ ಜೀನ್‌ಗಳಿರುವ ಹೋರಿಗಳನ್ನೇ ಬಳಸಿಕೊಂಡು ಎ೨ ಬೀಟ ಕೇಸೀನ್ ಹಾಲನ್ನು ನೀಡುವ ತಳಿಗಳನ್ನು ಬೆಳೆಸಲು ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಪ್ರಯತ್ನಗಳು ಸಾಗಿವೆ.

ನಮ್ಮಲ್ಲಿ? ನಮ್ಮಲ್ಲಿ ಇಂಥ ತಳಿಯು ಅಭಿವೃದ್ಧಿ ಬೇಡವೇನೋ ಎನ್ನುತ್ತದೆ ಕರ್ನಾಲ್‌ನ ರಾಷ್ಟ್ರೀಯ ಡ್ಯೆರಿ ಸಂಶೋಧನಾ ಸಂಸ್ಥೆಯ (ನ್ಯಾಶನಲ್ ಡ್ಯೆರಿ ರೀಸರ್ಚ್ ಇನ್ಸ್‌ಟಿಟ್ಯೂಟ್) ವಿಜ್ಞಾನಿಗಳ ಸಂಶೋಧನೆ. ಮೂರು ವರ್ಷಗಳ ಹಿಂದೆ ಈ ಸಂಸ್ಥೆಯ ಬಿ. ಪಿ. ಮಿಶ್ರ ಮತ್ತು ಸಂಗಡಿಗರು ಇಂಡಿಯನ್ ಜರ್ನಲ್ ಆಫ್ ಅನಿಮಲ್ ಸೈನ್ಸಸ್ ಪತ್ರಿಕೆಯಲ್ಲಿ ಪ್ರಕಟಿಸಿರುವ ಸಂಶೋಧನೆ ಭಾರತದಲ್ಲಿ ಇರುವ ಹೈನು ತಳಿಗಳಲ್ಲಿ ಎ೧ ಮತ್ತು ಎ೨ ಜೀನ್‌ಗಳ ವಿತರಣೆ ಹೇಗಿದೆ ಎಂದು ಪರಿಶೀಲಿಸಿದೆ. ಭಾರತದಲ್ಲಿರುವ ೧೫ ದನಗಳ ತಳಿಗಳಿಗೆ ಸೇರಿದ ೬೦೦ಕ್ಕೂ ಹೆಚ್ಚು ರಾಸುಗಳನ್ನೂ, ೮ ಎಮ್ಮೆ ತಳಿಗಳಿಗೆ ಸೇರಿದ ೨೦೦ಕ್ಕೂ ಹೆಚ್ಚು ಎಮ್ಮೆಗಳ ರಕ್ತವನ್ನು ತೆಗೆದು ಅವುಗಳಲ್ಲಿರುವ ಜೀನ್‌ಗಳನ್ನು ಪರಿಶೀಲಿಸಿದ್ದಾರೆ. ಇವುಗಳಲ್ಲಿ ಎ೧ ಮತ್ತು ಎ೨ ಜೀನ್‌ಗಳು ಎಷ್ಟರಲ್ಲಿ ಇವೆ ಎಂದು ಲೆಕ್ಕ ಹಾಕಿದ್ದಾರೆ. ಈ ಪರಿಶೀಲನೆಯ ಫಲಿತಾಂಶ: ಭಾರತದ ಎಲ್ಲ ಎಮ್ಮೆ ತಳಿಗಳಲ್ಲೂ – ಸುಪ್ರಸಿದ್ಧ ಮುರ್ರಾ, ಮೆಹಸಾನಾ ಹಾಗೂ ನಮ್ಮದೇ ದಕ್ಷಿಣ ಕನ್ನಡ ತಳಿಗಳೂ ಕೂಡಿ –ಕೇವಲ ಎ೨ ಬಗೆಯಷ್ಟೆ ಕಂಡು ಬಂದಿದೆ. ಎ೧ ಬೀಟ ಕೇಸೀನ್ ಜೀನ್ ಇಲ್ಲವೇ ಇಲ್ಲ.

ಇನ್ನು ಹಸುಗಳ ವಿಷಯಕ್ಕೆ ಬರೋಣ. ಹದಿನಾರು ಭಾರತೀಯ ರಾಸುತಳಿಗಳಲ್ಲಿ ಕೇವಲ ಮೂರರಲ್ಲಿ ಮಾತ್ರ ಅಲ್ಪ ಪ್ರಮಾಣದಲ್ಲಿ ಎ೧ ಜೀನ್ ಪತ್ತೆಯಾಗಿದೆ. ಉದಾಹರಣೆಗೆ, ನಮ್ಮ ಮಲೆನಾಡು ಗಿಡ್ಡ ತಳಿಯ ರಾಸುಗಳಲ್ಲಿ ನೂರರಲ್ಲಿ ಒಂದು ಪ್ರಾಣಿಯಲ್ಲಿ ಎಂಬಂತೆ ಮಾತ್ರ ಎ೧ ಜೀನ್ ತೋರ್ಪಟ್ಟಿದೆ. ಇನ್ನು ಕೇವಲ ಹಾಲಿಗಾಗಿಯೇ ಬೆಳೆಸುವ ಕಂಕ್ರೇಜ್, ಗಿರ್, ಸಹಿವಾಲ್ ಮತ್ತು ಕೆಂಪು ಸಿಂಧಿ ತಳಿಗಳಲ್ಲಿ ಹುಡುಕಿದರೂ ಎ೧ ಜೀನ್ ಇಲ್ಲವಂತೆ. ಅಲ್ಲಿ ನೂರಕ್ಕೆ ನೂರರಷ್ಟು ರಾಸುಗಳಲ್ಲಿ ಎ೨ ಮಾತ್ರ ಕಾಣಬರುತ್ತದೆ. ಅರ್ಥಾತ್ ಭಾರತೀಯ ರಾಸುಗಳ ಹಾಲಿನಲ್ಲಿ ಎ೨ ಬೀಟ ಕೇಸೀನ್ ಸಹಜವಾಗಿಯೇ ಹೆಚ್ಚು. ಅಪ್ಪಟ ದೇಶೀ ತಳಿಗಳಲ್ಲಂತೂ ಇದು ನೂರಕ್ಕೆ ನೂರು ಎ೨.

ಎ೨ ಬೀಟ ಕೇಸೀನ್‌ನ ಬಗ್ಗೆ ಇರುವ ಆತಂಕದ ಹಿನ್ನೆಲೆಯಲ್ಲಿ ಭಾರತೀಯ ರಾಸುಗಳನ್ನು ಸಂಕರಗೊಳಿಸುವ ಮುನ್ನ ಇದಕ್ಕಾಗಿ ಬಳಸುವ ವಿದೇಶೀ ತಳಿಗಳಲ್ಲಿನ ಎ೧/ಎ೨ ಸ್ಥಿತಿಯನ್ನು ಗಮನಿಸುವುದು ಒಳಿತು ಎನ್ನುತ್ತಾರೆ ಮಿಶ್ರ ಮತ್ತು ಸಂಗಡಿಗರು. ಇದೀಗ ಚೆನ್ನೈನಲ್ಲಿ ಎ೨ ಹಾಲಿನ ಮಹತ್ವವನ್ನೇ ಎತ್ತಿ ಹಿಡಿಯುವ ಎನ್‌ಜಿಓ ಒಂದು ಹುಟ್ಟಿಕೊಂಡಿದ್ದೂ ಆಗಿದೆ. ಅಪ್ಪಟ ಭಾರತೀಯ ಹಸುಗಳ ಹಾಲು ಎ೨ ಭರಿತ ಆರೋಗ್ಯಕರ ಹಾಲು ಎಂದೇ ಇಟ್ಟುಕೊಂಡರೂ, ಹಾಲಿನಲ್ಲಿ ಈ ಅಂಶಗಳು ಇವೆಯೇ ಇಲ್ಲವೇ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳುವ ಪರೀಕ್ಷೆಗಳು ಇನ್ನೂ ಲಭ್ಯವಿಲ್ಲ. ಹಾಗೆಯೇ ಬಿಸಿಎಂ ೭ ನಿಜಕ್ಕೂ ಅನಾರೋಗ್ಯವನ್ನುಂಟು ಮಾಡುತ್ತದೆ ಎನ್ನುವುದಕ್ಕೆ ಖಚಿತ ಪುರಾವೆಗಳು ಸಿಕ್ಕಿಲ್ಲ. ಏನೇ ಇರಲಿ. ಈ ಅಧ್ಯಯನಗಳು ಹಾಲು ವ್ಯಾಪಾರಿಗಳಿಗೆ ಬೆಲೆ ಏರಿಸಲು ಇನ್ನೊಂದು ಕಾರಣ ಒದಗಿಸಲಾರವು ಎಂದಷ್ಟೆ ಆಶಿಸೋಣ.

**– ಕೊಳ್ಳೇಗಾಲ ಶರ್ಮ**

Ref: 1. Mishra, BP et al, Status of Milk protein β-casein variants among Indian milch animals, Indian J. Animal Sciences, Vol 79 (7) Pp 722-725, July 2009.

2. Stanislaw Kaminski et al., Polymorphism of bovine beta-casein and its potential effect on human health, J Appl Genet 48(3), pp. 189–198, 2007.

(ಲೇಖಕರು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಕೇಂದ್ರದಲ್ಲಿ ವಿಜ್ಞಾನಿಗಳು ಮತ್ತು ಜನಪ್ರಿಯ ವಿಜ್ಞಾನ ಲೇಖಕರು)

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 34ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ಭಾರತೀಯ ಗೋತಳಿಯ ಎಲ್ಲ 33 ಪ್ರಭೇದಗಳನ್ನು ಈ ಇ–ಪತ್ರಿಕೆಯ ಮೂಲಕ ಪರಿಚಯಿಸಲಾಗಿದೆ. ಗೋ ಆಧಾರಿತ ಜೀವನ ಈಗಿನ ಕಾಲದಲ್ಲಿಯೂ ಹೇಗೆ ಸಾಧ್ಯ ಎಂಬ ಲೇಖನಗಳನ್ನು ವಿವಿಧ ಕ್ಷೇತ್ರಗಳಲ್ಲಿ ನೀಡಲಾಗಿದೆ. ಒಂದು ಸೀಮಿತ ವ್ಯಾಪ್ತಿಯ ವಿಷಯಗಳ ಪರಿಧಿಯಲ್ಲಿ ನೀಡಬೇಕಾದ ಬಹುತೇಕ ವಿಷಯಗಳನ್ನು ಈ ಪತ್ರಿಕೆಯ ಮೂಲಕ ನೀಡಲಾಗಿದೆ. ಈ ಪತ್ರಿಕೆಯಲ್ಲಿ ಮೂಡಿಬಂದ ಉತ್ತಮ ಲೇಖನಗಳನ್ನು ಒಟ್ಟು ಸೇರಿಸಿ ಪುಸ್ತಕ ರೂಪದಲ್ಲಿ ನೀಡುವ ಇರಾದೆ ಇದೆ. ತಮ್ಮ ಸಲಹೆಗಳಿಗೆ ಸ್ವಾಗತ.

# ಗೋಪುಷ್ಟಿ ಮಹಾಯಜ್ಞ

'ಗೋಮಾತೆ' ಜಗದ ಜನನಿ; ಸಕಲ ದೇವತೆಗಳ ಒಡಲು; ಎಲ್ಲವನ್ನೂ ಪಾವನಗೊಳಿಸುವ ಅಮೃತದ ಕಡಲು; ಮನುಷ್ಯನ ಪ್ರತಿ ಹನಿ ರಕ್ತದ ಹಿಂದಿನ ಹಾಲು, ಮೊಸರು, ತುಪ್ಪಗಳ ಮಹಾಧಾರೆ; ರೋಗ ನಿವಾರಿಸುವ ಮಹಾವೈದ್ಯೆ; ವಸುಂಧರೆಯನ್ನು ಸಸ್ಯಶ್ಯಾಮಲೆಯನ್ನಾಗಿಸುವ ಮಹಾನ್ ಪರಿಸರ ಸಂರಕ್ಷಕಿ. ಇಂತಹ ಅನನ್ಯ ಮತ್ತು ಅನೇಕ ಕೊಡುಗೆಗಳಿಂದಾಗಿ ಗೋಮಾತೆ ಭಗವಂತನ ಅನುಪಮ ಸೃಷ್ಟಿ; ಬಾಳ ಬೆಳಗುವ ಅಸೀಮ ಶಕ್ತಿ.

ಭಾರತದ ಪುಣ್ಯಧರಿತ್ರಿಯಲ್ಲಿ ೧೦೦ಕ್ಕೂ ಹೆಚ್ಚಿದ್ದ ಗೋಸಂತತಿ ನಾಶವಾಗಿ ಇಂದು ೩೦–೩೫ರಷ್ಟು ತಳಿಗಳು ಮಾತ್ರ ಉಳಿದುಕೊಂಡಿದೆ. ಹೀಗೆ ನಾಶದ ಅಂಚಿನಲ್ಲಿರುವ ಭಾರತೀಯ ಗೋವಂಶದ ಸಂರಕ್ಷಣೆ–ಸಂವರ್ಧನೆ–ಸಂಶೋಧನೆ–ಸಂಬೋಧನೆಗಳಿಗಾಗಿ ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳವರು 'ಕಾಮದುಘಾ' ಯೋಜನೆಯ ಮೂಲಕ ಹಲವು ರೀತಿಯ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ತಮಗೆಲ್ಲರಿಗೂ ತಿಳಿದ ಸಂಗತಿ.

**ಪ್ರೇರಣೆಯ ನಾಂದಿ – ಮಹಾನಂದಿ**

ಗೋಸಂರಕ್ಷಣೆಯ ಇತಿಹಾಸದಲ್ಲಿ ತನ್ನದೇ ಆದ ಹೆಜ್ಜೆಗಳನ್ನು ಒಡಮೂಡಿಸಿ ಕರ್ತವ್ಯ ನಿರ್ವಹಿಸಿದ ಶ್ರೀಶ್ರೀಗಳವರಿಗೆ ಇಂತದ್ದೊಂದು ವಿಶಿಷ್ಟ ಸ್ಫೂರ್ತಿ ದೊರೆತದ್ದು ಇಂದು ನಮಗೆ ಬರಿಯ ನೆನಪಾಗಿಯೇ ಉಳಿದ ಸಂತ ಮಹಾನಂದಿಯಿಂದ. ಗೋಸಂರಕ್ಷಣೆಯ ಸೂತ್ರಕ್ಕೆ ಹೊಸ ಭಾಷ್ಯ ಬರೆಯಲೆಂದೇ ಹುಟ್ಟಿಬಂದ ಮಹಾನಂದಿಯ ಆ ಅನುಪಮ ಪ್ರೇರಣೆಗೆ ಜೀವಸಂಕುಲ ರಕ್ಷಣೆಯ ಮಹಾಫಲವಿದೆ. ಮಣೆಯಲ್ಲಿ ಶ್ರೀಗಳವರ ಮನವನ್ನು ಗೆದ್ದ ನಂದಿ ಶ್ರೀರಾಮಚಂದ್ರಾಪುರಮಠದಲ್ಲಿ ಮಹಾನಂದಿಯಾಗಿ 'ಕಾಮದುಘಾ' ಯೋಜನೆಯ ಪ್ರೇರಕಶಕ್ತಿಯಾಗಿ ವಿರಾಜಮಾನವಾಯಿತು. ಮಹಾನಂದಿಯ ಆಗಮನದಿಂದ ಪ್ರಾರಂಭವಾದ ಗೋಸಂರಕ್ಷಣಾ ಜಾಗೃತಿಯ ಅಲೆ ಇಂದು ವಿಶ್ವವನ್ನೇ ವ್ಯಾಪಿಸಿದೆ; ಹತ್ತು–ಹಲವು ಸಾಧನೆಯ ಮೈಲುಗಲ್ಲುಗಳನ್ನು ಸ್ಥಾಪಿಸಿದೆ.

ಸಂತನಂತೆ ಬದುಕಿದ ಮಹಾನಂದಿಯ ಹೆಸರನ್ನು ಅಜರಾಮರಗೊಳಿಸಲು ಶ್ರೀರಾಮಚಂದ್ರಾಪುರದ ಗೋಶಾಲೆಗೆ 'ಮಹಾನಂದಿ ಗೋಲೋಕ' ಎಂದು ಪುನರ್ನಾಮಕರಣ ಮಾಡಲಾಗಿದೆ. ಮಹಾನಂದಿ ಬಾಳಿ ಬೆಳಗಿದ ಗೋಲೋಕ ಇದೀಗ ಗೋಸಂರಕ್ಷಣೆಯ ದಿವ್ಯತಾಣವೆನಿಸಿದೆ. ಇಲ್ಲಿ ಭಾರತೀಯವಾದ ೩೦ ತಳಿಗಳ ೩೦೦ಕ್ಕೂ ಹೆಚ್ಚು ಗೋವುಗಳನ್ನು ಸಂರಕ್ಷಿಸಲಾಗುತ್ತಿದೆ, ಸಂವರ್ಧಿಸಲಾಗುತ್ತಿದೆ ಮತ್ತು ಗೋಮಯ, ಗೋಮೂತ್ರಗಳಿಂದ ಹಲವಾರು ದಿವ್ಯೌಷಧಿಗಳನ್ನು ಸಿದ್ಧಪಡಿಸಲಾಗುತ್ತಿದೆ.

**ಸಾಧನೆಯ ಹಾದಿಯಲ್ಲಿ**

- ಸಮಗ್ರ ಭಾರತದ ದೇಶೀಯ ಗೋತಳಿಗಳನ್ನು ಹೊಂದಿರುವ ಜಗತ್ತಿನ ಏಕೈಕ ಗೋಶಾಲೆ : 'ಮಹಾನಂದಿ ಗೋಲೋಕ'.
- ಅಮೃತಮಹಲ್, ಹಳ್ಳಿಕಾರು, ಖಿಲಾರಿ, ಕೃಷ್ಣಾತೀರ, ಜವಾರಿ, ಮಲೆನಾಡು ಗಿಡ್ಡ, ಕಾಸರಗೋಡು, ವೆಚೂರು, ಕಂಗಾಯಂ, ಅಂಬ್ಲಾಚೇರಿ, ಬರಗೂರು, ಓಂಗೋಲ್, ದೇವನಿ, ಲಾಲ್ ಖಂದಾರಿ, ಗೌಳವ್, ಡಾಂಗಿ, ಗಿರ್, ಕಾಂಕ್ರೇಜ್, ನಾಗೋರಿ, ಥಾರ್‌ಪಾರ್ಕರ್, ರಾಟಿ, ಸಾಹಿವಾಲ, ಕೇರಿಗರ್, ಕೆಂಕಾಥ, ಪೊನ್ವಾರ್, ನಿಮಾರಿ, ಮಾಳವಿ, ಹರಿಯಾಣ, ಗಂಗಾತೀರ, ಸಿಂಧಿ... 'ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆ' ಯನ್ನು ಮಾಡಲಾಗುತ್ತಿದೆ.
- ಉತ್ತರದ ಪಥಮೇಡಾದ ಗೋಶಾಲೆಯಿಂದ ಕರ್ನಾಟಕಕ್ಕೆ ಸಹಸ್ರಾರು ಭಾರತೀಯ ಗೋವುಗಳನ್ನು ವಿತರಿಸಿದ 'ದತ್ತಶಂಕರ ಗೋಯಾತ್ರೆ'.
- ೧೨೧ ದಿನಗಳ ಪರ್ಯಂತ ವೈಭವಪೂರ್ಣವಾಗಿ ನಡೆದು ದಾಖಲೆ ನಿರ್ಮಿಸಿದ 'ಕಾಮಧೇನು ಮಹಾಯಾಗ'.
- ಗೋಸಂರಕ್ಷಣಾ ಜಾಗೃತಿಗಾಗಿ ಕರ್ನಾಟಕ ಮತ್ತು ಉತ್ತರ ಕೇರಳದಲ್ಲಿ ಸಂಚರಿಸಿದ 'ಭಾರತೀಯ ಗೋಯಾತ್ರೆ'.
- ಗೋಸಂರಕ್ಷಣೆ ಅರಿವಿಗಾಗಿ ಕರ್ನಾಟಕ ಮತ್ತು ಉತ್ತರ ಕೇರಳದಾದ್ಯಂತ ನಡೆಸಿದ 'ಗೋ ಸಂಸತ್' ಸಭೆಗಳು ಮತ್ತು 'ಗೋ ಸಂಸತ್' ರಥಯಾತ್ರೆ.
- ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಲ್ಲಿ 'ಗೋಶಾಲೆಗಳ ಸ್ಥಾಪನೆ'.
- ಗೋವಿಶ್ವಕೋಶ: ಭಾರತೀಯ ಗೋವಿನ ಬಗ್ಗೆ ಪ್ರಾಚೀನ ಹಾಗೂ ಇತ್ತೀಚಿನ ಸಾಹಿತ್ಯಗಳಲ್ಲಿ ಉಲ್ಲೇಖವಾಗಿರುವ ಸಮಗ್ರ ವಿಚಾರಗಳನ್ನು ಸರಳ ಭಾಷೆಯಲ್ಲಿ ತಿಳಿಯಪಡಿಸುವ ಸಂಗ್ರಹ ಸಾರ. ಆಧ್ಯಾತ್ಮ, ಕಥಾ, ಧರ್ಮ, ಸಂಸ್ಕೃತಿ, ವಿಜ್ಞಾನ, ಕೃಷಿ, ಪಂಚಗವ್ಯ ಇತ್ಯಾದಿ ವಿವಿಧ ಖಂಡಗಳು ಮುದ್ರಣಗೊಳ್ಳಲಿದೆ. ಆಧ್ಯಾತ್ಮ ಖಂಡವು ಪ್ರಕಟಗೊಂಡಿದ್ದು, ಕಥಾ ಖಂಡ ಹಾಗೂ ಧರ್ಮ ಖಂಡವು ಮುದ್ರಣ ಹಂತದಲ್ಲಿದೆ.
- ಭಾರತೀಯ ಗೋಬ್ಯಾಂಕ್: ಭಾರತೀಯ ಗೋವು ಯಾವತ್ತೂ ಅನಾಥವಾಗಬಾರದು ಮತ್ತು ಆಸಕ್ತರೊಬ್ಬರಿಗೆ ಸುಲಭ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಗೋಬ್ಯಾಂಕ್ ಆರಂಭಿಸಲಾಗಿದ್ದು, ಈ ಯೋಜನೆಯಲ್ಲಿ ಶ್ರೀಮಠದ ವಿವಿಧ ಗೋಶಾಲೆಗಳಿಂದ ಈಗಾಗಲೇ ೩೦೦೦ಕ್ಕೂ ಅಧಿಕ ಗೋವುಗಳನ್ನು ಗೋಪ್ರೇಮಿಗಳಿಗೆ ನೀಡಲಾಗಿದೆ.
- ಮೇವು ಬ್ಯಾಂಕ್: ಮೇವು ಲಭ್ಯವಿದ್ದಾಗ ಸಂಗ್ರಹಿಸಿಟ್ಟು ಅಗತ್ಯವಿರುವಾಗ ವಿತರಣೆ ಮಾಡಿ ಗೋವುಗಳು ಕಸಾಯಿಖಾನೆಗೆ ಹೋಗುವುದನ್ನು ತಡೆಗಟ್ಟುವುದಕ್ಕೋಸ್ಕರ ಮೇವು ಬ್ಯಾಂಕ್ ಪ್ರಾರಂಭವಾಗಿದೆ. ಈ ವರ್ಷ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಉಚಿತ ಮೇವು ವಿತರಣೆ ಮಾಡಲಾಗಿದೆ.
- **'ಗೋ ವಿಶ್ವ'** ಕನ್ನಡ ಅಂತರಜಾಲ ಪತ್ರಿಕೆ (www.vishwagou.org) ೨೦೦೭ ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿದ್ದು ಇದುವರೆಗೆ ೩೩ ಸಂಚಿಕೆಗಳು ಪ್ರಕಟಗೊಂಡಿವೆ.
- ಭಾರತೀಯ ಗೋವಂಶದ ಸತ್ವ–ಮಹತ್ವಗಳನ್ನು ಜಗತ್ತಿಗೆ ಸಾರಿದ 'ವಿಶ್ವ ಗೋ ಸಮ್ಮೇಳನ'
- ವಿಶ್ವಜನನಿ ಗೋಮಾತೆಗೆ ಲಕ್ಷಾಂತರ ಗೋಭಕ್ತ

ಮಹಿಳೆಯರಿಂದ ಸಮರ್ಪಿತವಾದ 'ಕೋಟಿ ನೀರಾಜನ'.

- ಬೆಂಗಳೂರಿನ ೧೧ ವಿವಿಧ ಕೇಂದ್ರಗಳಲ್ಲಿ ಗೋರಕ್ಷಣೆಯ ಜಾಗೃತಿ ಮೂಡಿಸಿದ ಗೋಭಕ್ತರ ಸಮ್ಮಿಲನ 'ಗೋಸಂಧ್ಯಾ'.
- ಸುವರ್ಣ–ರಜತ–ಮುತ್ತು–ರತ್ನಗಳಿಂದ ಜಗತ್ತಿನಲ್ಲೆ ಮೊಟ್ಟ ಮೊದಲು ನಡೆದ 'ಗೋಮಾತಾ ತುಲಾಭಾರ'.
- ಜೀವಜಗತ್ತಿನ ಮಹಾದೀಪವೆನಿಸಿದ ಗೋಮಾತೆಗೆ ಹುಬ್ಬಳ್ಳಿಯಲ್ಲಿಸಂಪನ್ನಗೊಂ ಡಿರುವ 'ದೀಪಗೋಪುರ'.
- ಮಾ ಗೋ ಪ್ರಾಡಕ್ಟ್ಸ್: ಅಮೃತಸಾರ ಮೊದಲಾದ ದಿವ್ಯೌಷಧಗಳ ಮೂಲಕ ರೋಗಮುಕ್ತ ಹಾಗೂ ಸಹಜ ಜೀವನ ನಿರ್ವಹಣೆಗೆ ಸಹಕಾರ.
- ಗೋಜಾಗೃತಿಗಾಗಿ ಸಮಗ್ರ ಭಾರತದಾದ್ಯಂತ ಸಂಚರಿಸಿದ
- 'ವಿಶ್ವ ಮಂಗಲ ಗೋಗ್ರಾಮ ಯಾತ್ರೆ'.
- ಗೋಹತ್ಯಾ ನಿಷೇಧವನ್ನು ಆಗ್ರಹಿಸಿ ವಿವಿಧ ಸಂಘಸಂಸ್ಥೆಗಳ ಸಹಕಾರದೊಂದಿಗೆ ೮.೨ ಕೋಟಿ ಗೋಭಕ್ತರ ಸಹಿ ಸಂಗ್ರಹ ಹಾಗೂ ರಾಷ್ಟ್ರಪತಿಗಳಿಗೆ ಸಮರ್ಪಣೆ.

ನಮ್ಮ ಒಂದೊಂದು ಹನಿ ರಕ್ತದ ಹಿಂದೆ ನೂರಾರು ಹನಿ ಗೋಮಾತೆಯ ಹಾಲಿದೆ. ಗೋಸಂರಕ್ಷಣೆ ಕೇವಲ ಧಾರ್ಮಿಕತೆಯಲ್ಲ, ಅದು ಆರ್ಥಿಕತೆಯ ಮೂಲ.

**ಗೋಪುಷ್ಟಿ ಮಹಾಯಜ್ಞ**

ಮಹಾನಂದಿಯ ಜೀವಿತೋದ್ದೇಶವನ್ನು ಈಡೇರಿಸುವ; ಪರಮಪೂಜ್ಯ ಶ್ರೀಶ್ರೀಗಳವರ ಬದುಕಿನ ಕನಸನ್ನು ನನಸಾಗಿಸುವ ಬದ್ಧತೆ ಗೋಪ್ರೇಮಿಗಳ ಹೆಗಲಮೇಲಿದೆ. ಅಂತಹ ನಮ್ಮ ಕರ್ತವ್ಯದ ಜ್ಞಾಪನಕ್ಕಾಗಿ ಪರಮಪೂಜ್ಯರು ಪ್ರಕೃತ 'ಗೋಪುಷ್ಟಿ ಮಹಾಯಜ್ಞ'ವನ್ನು ಆಯೋಜಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಶ್ರೀರಾಮಚಂದ್ರಾಪುರಮಠದ 'ಮಹಾನಂದಿ ಗೋಲೋಕ' ವನ್ನು ಮಾದರಿ ಗೋಶಾಲೆಯಾಗಿ ರೂಪಿಸಿ, ಅಲ್ಲಿ ಗೋವಿನ ಸಮಗ್ರ ಮಾಹಿತಿ ಜಗತ್ತಿಗೆ ಲಭ್ಯವಾಗುವಂತೆ ಮಾಡಿ, ವಿಶ್ವದ ಸದ್ಯಃಕಾಲದ ಏಕೈಕ ಸಕಲ ಭಾರತೀಯ ಗೋತಳಿ ಗೋಶಾಲೆಯನ್ನು ಪರಿಪೂರ್ಣಗೊಳಿಸುವ ಮತ್ತು ಇದರೊಂದಿಗೆ ಇನ್ನೊಮ್ಮೆ ಮನೆಯಂಗಳಕ್ಕೆ, ಮನದಂಗಳಕ್ಕೆ ಗೋವಿಷಯವನ್ನು ಕೊಂಡೊಯ್ದು ಜಾಗೃತಿ ಮೂಡಿಸುವ ಸತ್ಕಾರ್ಯ ಇದರ ಉದ್ದೇಶ.

ಪ್ರಕೃತ, ಮಹಾನಂದಿ ಗೋಲೋಕದಲ್ಲಿ ಗೋಸಂರಕ್ಷಣೆಯ ಕಾರ್ಯ ಸದಾ ಸಾಗಬೇಕಾಗಿದೆ. ಗೋವುಗಳಿಗೆ ಮೇವು, ನೀರು, ಆಹಾರ, ಆರೋಗ್ಯ, ಸೌಲಭ್ಯಗಳನ್ನು ನಿರಂತರಗೊಳಿಸಬೇಕಿದೆ. ಗೋದಾನ, ಗೋಪೂಜೆ, ಗೋಗ್ರಾಸಗಳಂತಹ ನಮ್ಮ ಪ್ರಾಚೀನ ಸೇವಾರಾಧನೆಗಳು ಪುನರವತರಣಗೊಳ್ಳಬೇಕಿದೆ. ಸಂತೃಪ್ತಗೊಂಡ ಗೋವಿನ ಅನುಗ್ರಹ ಆಶೀರ್ವಾದಗಳಿಂದ ಲೋಕಕಲ್ಯಾಣ ಸಾಧಿತವಾಗಬೇಕಿದೆ.

ಗೋಪ್ರೇಮಿಗಳಾದ ನಾವೆಲ್ಲ ಶ್ರೀಶ್ರೀಗಳವರ ಗೋಸಂರಕ್ಷಣೆಯ ಈ ಮಹಾಯಜ್ಞದಲ್ಲಿ ತನು–ಮನ–ಧನಗಳಿಂದ ಪಾಲ್ಗೊಂಡು ಕೃತಾರ್ಥರಾಗಬೇಕಿದೆ. ಅದಕ್ಕಾಗಿ...

ಮಹಾನಂದಿ ಗೋಲೋಕಕ್ಕೆ ಆಗಮಿಸಿ.. ಗೋಪೂಜೆ ಮಾಡಿ.. ಗೋಗ್ರಾಸ ಸಮರ್ಪಿಸಿ.. ಗೋಬಂಧುಗಳಾಗಿ.. ಗೋಸೇವಾ ಪ್ರಚಾರಕರಾಗಿ.. ಗೋಮಾತೆಯ ಸೇವೆಯ ಮೂಲಕ ಜೀವನ ಪಾವನಗೊಳಿಸೋಣ.

**ಸೇವಾ ಪ್ರಕಲ್ಪಗಳು**

ಗೋಪುಷ್ಟಿ ಸೇವಾಸಂಕಲ್ಪ: ರೂ.2000

ಗೋಲೋಕದ ಒಂದು ದಿನದ ಪಶು ಆಹಾರ: ರೂ.5000

ಗೋಲೋಕದ ಒಂದು ದಿನದ ಮೇವು: ರೂ. 10,000

ಗೋದಾನ ಸೇವೆ: ರೂ.11,000

ಗೋಬಂಧು (ಒಂದು ಗೋವಿನ ವಾರ್ಷಿಕ ದತ್ತು ಸ್ವೀಕಾರ): ರೂ.18,250

ದೇಣಿಗೆಯನ್ನು Mahanandi Gouloka, SB A/c No. 3132500101380101, KBL Hosanagara ಖಾತೆಗೆ ಜಮಾ ಮಾಡಬಹುದು (IFC No. KARB0000313). ದೇಣಿಗೆಗಳು ಆದಾಯ ತೆರಿಗೆ 80G ಪ್ರಕಾರ ವಿನಾಯಿತಿಯನ್ನು ಹೊಂದಿರುತ್ತದೆ.

Admin. Office: Shree Ramashrama, #2A, JP Road, Girinagara 1st Phase, Bengaluru - 560085.

080–26724979, 08185–256050, 9449595206, 9449595208, 9449595224

www.vishwahitam.org / www.hareraama.in / www.vishwagou.org E-Mail: info@vishwahitam.org / info@hareraama.in




